ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
ಆರ್.ಪಿ.ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್ )

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಬಳ್ಳಾಪುರ.**

**ಎಸ್.ಸಿ. ಸಂಖ್ಯೆ: 111/2021**

| | |
|---|---|
| PW | 4 |
| CW | 9 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **15.03.2024**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಶಾಂತ್ |
| ತಂದೆಯ/ಗಂಡನ ಹೆಸರು | : | ಶಂಕರಪ್ಪ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ತರಕಾರಿ ವ್ಯಾಪಾರ |
| ವಾಸಸ್ಥಳ | : | ಗೌರಿಬಿದನೂರು |

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ

1. ಮೃತ ವಿಶ್ವನಾಥ ಗೊತ್ತಿಲ್ಲ. ಚಾಸಾ -1 ರಿಂದ 5 ಗೊತ್ತಿಲ್ಲ. ಚಾಸಾ - 6 , 7 ಗೊತ್ತು. ಚಾಸಾ-8 ಗೊತ್ತು. ಚಾಸಾ - 10 ರಿಂದ 15 ಗೊತ್ತಿಲ್ಲ. ನ್ಯಾಯಾಲಯದ ಕಂಪ್ಯೂಟರ್ ನಲ್ಲಿ ಕಾಣಿಸುವ ಆರೋಪಿಗಳ ಪೈಕಿ 1 ಮತ್ತು 3 ನೇ ಆರೋಪಿಗಳು ಗೊತ್ತು. 2 ನೇ ಆರೋಪಿ ಗೊತ್ತಿಲ್ಲ. 4 ನೇ ಆರೋಪಿ ಗೊತ್ತಿಲ್ಲ.

2) ಎರಡು ವರ್ಷಗಳ ಹಿಂದೆ ರಾತ್ರಿ 10.30 ರಿಂದ 11.00 ಗಂಟೆ ಸಮಯದಲ್ಲಿ ಗೌರಿಬಿದನೂರಿನ ಸಂತೆ ಮೈದಾನದಲ್ಲಿ ನಮ್ಮ ಸ್ನೇಹಿತರ ಮನೆಯಲ್ಲಿ ತಿಥಿ ಕಾರ್ಯಕ್ಕೆ ನಾನು , ಚಾಸಾ -6 , 7 , 8 ರವರು ಹೋಗಿದ್ದೆವು. ನಾವು ಊಟ ಮುಗಿಸಿ ಸೇತುವೆ ಮೇಲೆ ಕುಳಿತಿದ್ದೆವು. ರಾತ್ರಿ 10.30 ರ ಸಮಯದಲ್ಲಿ ಅಗ 1 ಮತ್ತು 3 ನೇ ಆರೋಪಿಗಳು ಬೈಪಾಸ್ ಕಡೆಯಿಂದ ಬಂದರು. ಅಗ ಚಾಸಾ-6 ರವರು 1 ನೇ

PW:4 CW:9

ಆರೋಪಿಯನ್ನು ಇಲ್ಲಿ ಯಾಕೆ ಬಂದಿದ್ದೀರಿ ಎಂದು ದುಡ್ಡು ಕೇಳುತ್ತಿದ್ದರು. ಅಗ 1 ನೇ ಆರೋಪಿ ಈಗ ದುಡ್ಡು ಇಲ್ಲ ಕೊಡಲು ಆಗುವುದಿಲ್ಲ ಎಂದು ಹೇಳಿದ , ನಂತರ ಕೊಡುತ್ತೇನೆ ಎಂದು ಹೇಳಿದ . ನಿಮ್ಮದು ದೊಡ್ಡಬಳ್ಳಾಪುರ ಇಲ್ಲಿ ನಿಮಗೆ ಏನು ಕೆಲಸ ಎಂದು ಅವರನ್ನು ಚಾಸಾ -6 ಬೈದು ಕಳುಹಿಸಿದರು. ಅಗ ಪೊಲೀಸರು ಬಂದರು ಅಗ ನಾವು ಎಲ್ಲಾ ಓಡಿ ಹೋದೆವು.

3) ವಿಶ್ವನಾಥ ಹೇಗೆ ,ಎಲ್ಲಿ ತೀರಿಕೊಂಡ ನನಗೆ ಗೊತ್ತಿಲ್ಲ. ಅವರ ಸಾವಿಗೆ ಯಾರು ಕಾರಣ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

4) ಪೊಲೀಸರು ಬರುತ್ತಿದ್ದದ್ದನ್ನು ನೋಡಿ 4 ಜ ನಆರೋಪಿಗಳು ಅಲ್ಲಿಂದ ಓಡಿ ಹೋದರು , ಅಗ ನಾವು ಪೊಲೀಸರನ್ನು ಕಂಡು ಹೇಗೆ ಓಡಿ ಹೋಗುತ್ತಿದ್ದಾರೆ ಎಂದು ಮಾತನಾಡಿಕೊಂಡೆವು ಎಂದರೆ ಸರಿಯಲ್ಲ. ದಿಃ 06.07.2021 ರಂದು ನಾನು , ಮನೋಜಾ , ಶ್ರೀಕಾಂತ , ಚರಣ್ ರಾಜ್ , ಪ್ರಶಾಂತ್ ಸೇರಿ ಬೊಂಬು ಡಾಬಾ ದಲ್ಲಿ ಕುಳಿತಿದ್ದಾಗ ದಿಃ 04.07.2021 ರಂದು ಮನೋಜ ಮತ್ತು ಶೀಕಾಂತ , ಅಕಾಶ್ ಹಾಗೂ ಮಂಜುನಾಥ ರವರೊಂದಿಗೆ ಬಂದಿದ್ದು , ಅ ದಿನ ಶಿಕ್ಷಕ ಎನ್ ವಿಶ್ವನಾಥ ಕೊಲೆಯಾಗಿದ್ದರ ಬಗ್ಗೆ ವಿಚಾರಿಸಿದಾಗ ಮನೋಜ ಮತ್ತು ಶೀಕಾಂತ ಬೇವತು ನಮಗೆ ಗೊತ್ತಿಲ್ಲ ಎಂದು ಗಾಬರಿಯಿಂದ ದ್ವಿಚಕ್ರ ವಾಹನದಲ್ಲಿ ಹೊರಟು ಹೋದರು ಎಂದರೆ ಸರಿಯಲ್ಲ.

**5)** ನಾನು ಈಗ ಓದಿ ಹೇಳಿದಂತೆ '' ಅಷ್ಟೋತ್ತಿಗೆ ಪೊಲೀಸರು ಅಲ್ಲಿಗೆ ಬರುತ್ತಿದ್ದನ್ನು ಕಂಡು ಅವರು ನಾಲ್ಕು ಜನರು ಅಲ್ಲಿಂದ ಓಡಿ ಹೋದರು. ಅಗ ನಾವು ...........................................................................................

........................................................................................,.........

PW:4 CW:9

…………………………………………………………………ಪ್ರಶಾಂತನಿಗೆ ಕೊಟ್ಟಿದ್ದ ದ್ವಿಚಕ್ರ ವಾಹನವನ್ನು ಮನೋಜನು ತೆಗೆದುಕೊಂಡು ಶ್ರೀಕಾಂತನೊಂದಿಗೆ ಹೊರಟು ಹೋದನು. " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ **- 4** ಎಂದು ಗುರುತಿಸಲಾಯಿತು.

**6)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ - 4 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು **:** ಶ್ರೀ**.**ಎಂ**.** ಎಸ್ **.** ಆರ್ ವಕೀಲರಿಂದ**,** ಆರೋಪಿ/ ತರ ಪರವಾಗಿಃ

**7)** ಏನೂ ಇಲ್ಲಾ.

ಮರುವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 15.03.2024 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ**/-**

ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

PW:4 CW:9

PW:4 CW:9